ಕಡೆ ಕೆಲಸ ಹುಡುಕಿಕೊಂಡು ಅಲೀತಿದ್ದಾರೆ. ಈಗ ಊರಲ್ಲಿ ನಮ್ಮಂಥ ಮುದುಕರಷ್ಟೇ ಇದೀವಿ, ಆಗಲೋ ಈಗಲೋ ಬಿದ್ದೊಗೊ ಮಾಳಿಗೆ ಮನೆಗಳಿವೆ. ಅವನ್ನೇ ಗುಡಿಸಿ, ಮೆತ್ತಿ, ಸಾರಿಸಿಕೊಂಡು ಹೆಂಗೊ ಕಾಲ ಹಾಕ್ತಿದೀವಿ. ನಾವು ಸತ್ತ ಮೇಲೆ ಈ ಮನೆಗಳೂ ಬಿದ್ದೊಗ್ತವೆ. ತಾರಸಿ ಮನೆ ಇರೋರು ಮಾತ್ರ ಊರಲ್ಲೇ ಉಳ್ಕತರೆ... ಊರಲ್ಲಿ ಒಂದ್ ಸಲ ಸುತ್ತಾಡ್‌ಕಂಡ್ ಬನ್ನಿ... ಎಲ್ಲ ಮನೆಗಳಲ್ಲೂ ಮುದುಕರು ಮತ್ತು ಗೊಡ್ಡು ದನಗಳೇ ಕಾಣ್ಸಿಸ್ತವೆ' ಎಂದು ಊರಿಗೆ ಹೊಸದಾಗಿ ಬಂದವರ ಎದುರು ಹೇಳುತ್ತಾರೆ. ಹೊಸಳ್ಳಿ ಮಾತ್ರವಲ್ಲ ದುರ್ಗ ಜಿಲ್ಲೆಯ ಎಲ್ಲ ಹಳ್ಳಿಗಳಲ್ಲೂ ಇದೇ ಪರಿಸ್ಥಿತಿ.

ಹೊಸಳ್ಳಿಯಲ್ಲಿ ನಡು ಪ್ರಾಯದವರು ಸಾಕಷ್ಟು ಜನ ಇದ್ದಾರೆ. ಅವರೆಲ್ಲ ಒಂದಲ್ಲ ಒಂದು ರಾಜಕೀಯ ಪಕ್ಷಗಳ ಕಾರ್ಯಕರ್ತರಾಗಿದ್ದಾರೆ. 'ಊರಿಗೆ ಮತ್ತೆ ಒಳ್ಳೇ ದಿನಗಳು ಬರ್ತವೆ, ಮುಂದೆ ಕಾಲ ಕಾಲಕ್ಕೆ ಮಳೆಯಾಗುತ್ತೆ, ಇನ್ನು ಮೂರ್ನಾಲ್ಕು ವರ್ಷಗಳಲ್ಲಿ ನಮ್ಮ ಆದಾಯ ಡಬ್ಬಲ್ ಆಗುತ್ತೆ... ಆಗಲಿಲ್ಲಾ ಅಂದ್ರೂ ಅನ್ನಭಾಗ್ಯದ ಅಕ್ಕಿಯಂತೂ ಸಿಕ್ಕೇ ಸಿಗುತ್ತೆ... ಎಣ್ಣೆ, ಉಪ್ಪು, ಬಟ್ಟೆ–ಬರೆಗೆ ದುಡ್ಡು ಹೊಂದಿಸಿಕೊಂಡರೆ ಸಾಕು, ಹೆಂಗೊ ಜೀವನ ನಡೆಸಬಹುದು' ಎಂಬ ನಿರಾಳ ಭಾವದಲ್ಲಿದ್ದಾರೆ. ಇದೇ ಹೊಸಳ್ಳಿಯ ಜೀವಂತಿಕೆಯ ಗುಟ್ಟು.

ದುಡಿಮೆಗಾಗಿ ಊರು ಬಿಟ್ಟು ಹೋದವರು, ಪರ ಊರುಗಳಲ್ಲಿ ಕಾಯಂ ನೌಕರಿ ಮಾಡುವವರು ಆಗಾಗ ತಮ್ಮ ಅಪ್ಪ ಅಮ್ಮಂದಿರಿಗೆ ಕಳಿಸುವ ಅಷ್ಟಿಷ್ಟು ಹಣದಿಂದ ಊರ ಮನೆಗಳಲ್ಲಿ ಹಬ್ಬ, ಹರಿದಿನಗಳು ನಡೆಯುತ್ತಿವೆ. ಇಷ್ಟೆಲ್ಲ ಬವಣೆಗಳ ನಡುವೆಯೂ ಹೊಸಳ್ಳಿಯಲ್ಲಿ ಸರ್ಕಾರಿ ಜೂನಿಯರ್ ಕಾಲೇಜಿದೆ. ಜನ ಮತ್ತು ಜಾನುವಾರುಗಳ ಆಸ್ಪತ್ರೆ, ಕೆಇಬಿ ಆಫೀಸು, ಗ್ರಾಮ ಪಂಚಾಯ್ತಿ ಇತ್ಯಾದಿ ಸರ್ಕಾರಿ ಕಚೇರಿಗಳಿವೆ. ಹೊಸಳ್ಳಿಯ ಸುತ್ತ ಮುತ್ತ ಇರುವ ಪ್ರಖರ ಬಿಸಿಲಿನಿಂದ ವಿದ್ಯುತ್ ಉತ್ಪಾದಿಸಲು ಮುಂದಾಗಿರುವ ಗುಜರಾತು ಮೂಲದ ಸೋಲಾರ್ ಕಂಪನಿಯೊಂದು ತಿಂಗಳ ಹಿಂದೆ ಹೊಸಳ್ಳಿಯಲ್ಲಿ ಕಚೇರಿ ತೆರೆದುಕೊಂಡು ಕೂತಿದೆ! ಊರ ಸುತ್ತಲಿನ ಹಳ್ಳಿಗಳ ಹುಡುಗರು, ಹುಡುಗಿಯರು ಹೊಸಳ್ಳಿಯ ಜೂನಿಯರ್ ಕಾಲೇಜಿಗೆ ನಿತ್ಯ ಬಂದು ಹೋಗುತ್ತಾರೆ. ತಿಂಗಳಿಗೊಮ್ಮೆ ಸಂಬಳ ಎಣಿಸುವ ಸರ್ಕಾರಿ ನೌಕರರು ಮಾತ್ರ ಖುಷಿ ಖುಷಿಯಾಗಿ ಕಿವಿಗೆ ಮೊಬೈಲುಗಳನ್ನು ಸಿಕ್ಕಿಸಿಕೊಂಡು ಮಾತಾಡುತ್ತ, ಅತ್ತಂದಿತ್ತ ಓಡಾಡಿಕೊಂಡು ಚುರುಕಾಗಿದ್ದಾರೆ. ಹೊಸಳ್ಳಿಯಲ್ಲಿ ಅನುಕೂಲಸ್ಥರು ಇಲ್ಲ ಅಂತೇನೂ ಇಲ್ಲ. ಆದರೆ ಅವರು ಊರಿಗೂ, ತಮಗೂ ಸಂಬಂಧವೇ ಇಲ್ಲ ಎನ್ನುವಂತಿದ್ದಾರೆ!

ಹೊಸಳ್ಳಿಯ ಎಲ್ಲ ಜನರಲ್ಲಿ ಒಂದೆರಡು ಜನ್ಮಜಾತ ಗುಣಗಳಿವೆ. ಅದೆಂದರೆ ಮೂಕರ್ಜಿ ಬರೆದು ಯಾವ ಕೆಲಸವೂ ನಿರಾತಂಕವಾಗಿ ನಡೆಯದಂತೆ ನೋಡಿಕೊಳ್ಳುವುದು. ಇನ್ನೊಂದು ದೇಶದ ರಾಜಕಾರಣವೆಲ್ಲ ತಮ್ಮ ಮನೆಯಂಗಳದಲ್ಲೇ ನಡೆಯುತ್ತಿದೆ ಎಂಬ ಭ್ರಮೆಯಲ್ಲಿರುವುದು. ಟೀವಿ ಚಾನೆಲ್‌ಗಳಲ್ಲಿ, ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನೆಲ್ಲ ನಿಜವೆಂದೇ ನಂಬುತ್ತಾರೆ. ಎಲ್ಲವನ್ನೂ ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನ ಮಾಡುವ ಕಲೆ ಹೊಸಳ್ಳಿ ಜನರಿಗೆ ಕರಗತವಾಗಿದೆ.

★★★

ಮಹಾತ್ಮ ಗಾಂಧಿ ಹೈಸ್ಕೂಲಿನ ಅರವತ್ತನೇ ವರ್ಷದ ಕಾರ್ಯಕ್ರಮವನ್ನು ವಜ್ರ ಮಹೋತ್ಸವದ ಹೆಸರಿನಲ್ಲಿ ನಡೆಸಬೇಕೆಂಬ ಆಲೋಚನೆಯನ್ನು ಊರಜನರ ತಲೆಗೆ ತುಂಬಿದವನು ಶಾನುಭೋಗರ ಪುರುಷೋತ್ತಮ. ಊರಿನ ದೊಡ್ಡವರು ಅವನನ್ನು ಪುರುಷಿ ಎಂದು ಕರೆದರೆ, ಕಿರಿಯರು ಪುರುಷಣ್ಣ ಎಂದೂ ಇನ್ನು ಕೆಲವರು ಸಣ್ಣ ಶಾನುಭೋಗರು ಎಂದು ಕರೆಯುತ್ತಾರೆ.

ಮೂರು ವರ್ಷಗಳ ಹಿಂದೆ ಲಕ್ವ ಹೊಡೆದು, ಚೇತರಿಸಿಕೊಳ್ಳಲಾಗದೆ ಹಾಸಿಗೆಯಲ್ಲೇ ಮಲಗಿ ದಿನ ಕಳೆಯುತ್ತಿದ್ದರೂ ಊರ ಸಮಸ್ತ ಆಗುಹೋಗುಗಳನ್ನು ಗಮನಿಸುತ್ತಲೇ ಇರುವ ಪುರುಷೋತ್ತಮನ